ಪಿ.ಡಬ್ಲು-೧

ದಿ: ೪.೦೪.೨೦೨೪ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ, ಮುಂದುವರೆದ ಪಾಟೀ ಸವಾಲಿಗೆ ಒಳಪಡಿಸಲಾಯಿತು.

<u>**ಮುಂದುವರೆದ ಪಾಟೀ ಸವಾಲು**</u>: ಪ್ರತಿವಾದಿ ಪರ ಶ್ರೀ ಎ.ಜಿ.ಎನ್. ವಕೀಲರಿಂದ,

ಪ್ರತಿವಾದಿಯರು ಮತ್ತು ಅವರ ಮಕ್ಕಳು ಬೈಯಮ್ಮನ ವಿರುದ್ದ ಓ.ಎಸ್.ನಂ.೨೦೨-೨೦೧೦ ಮತ್ತು ೨೨೪-೨೦೧೦ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಗಳು ಚಾಲ್ತಿಯಲ್ಲಿದ್ದಾಗ ಬೈಯಮ್ಮ ಇವರು ಅವರ ಮಗ ನಾರಾಯಣಸ್ವಾಮಿರವರಿಗೆ ದಾನ ಪತ್ರ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಓ.ಎಸ್.೨೨೪-೨೦೧೦ ರಲ್ಲಿ ನಮ್ಮ ತಂದೆ ನಾರಾಯಣಸ್ವಾಮಿ, ಅತ್ತೆ ಬೈಯಮ್ಮ ಮತ್ತು ನಾನು ಮತ್ತು ನನ್ನ ಅಕ್ಕ ತಂಗಿಯರು ಪಕ್ಷದಾರರು ಇದ್ದೆವು ಎಂದರೆ ನನಗೆ ಗೊತ್ತಿಲ್ಲ. ನಿಪಿ.೧ ದಾನಪತ್ರ ಸದರಿ ದಾವೆ ಚಾಲ್ತಿಯಲ್ಲಿದ್ದಾಗ ಆಗಿದೆ ಎಂದರೆ ಸಾಕ್ಷಿಯು ಸದರಿ ದಾಖಲೆ ೨೦೧೩ ರಲ್ಲಿ ಆಗಿದೆ ಆದರೆ ದಾವೆ ಚಾಲ್ತಿಯಲ್ಲಿತ್ತೋ ಇಲ್ಲವೋ ತನಗೆ ಗೊತ್ತಿಲ್ಲ ಎನ್ನುತ್ತಾರೆ.

ಬೈಯಮ್ಮರವರಿಗೆ ಆಗಿರುವ ದಾನಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನೀವು ದಾಖಲೆಗಳನ್ನು ಹಾಜರುಪಡಿಸಿರುವುದಾಗಿ ನಿಮ್ಮ ವಕೀಲರನ್ನು ಕೇಳಿದ್ದೀರಾ ಎಂದರೆ ಸಾಕ್ಷಿಯು ತನ್ನ ತಂದೆ ದಾವೆ ಪ್ರಕ್ರಿಯೆಗಳನ್ನು ನೋಡಿಕೊಳ್ಳುತ್ತಿದ್ದು, ಅವರು ಹಾಜರುಪಡಿಸಿದ್ದಾರೆ ಎನ್ನುತ್ತಾರೆ. ವಾದ ಪತ್ರದಲ್ಲಿ ನಮೂದಿಸಿರುವ ಆಸ್ತಿಯನ್ನು ಬರೆದುಕೊಡುವ ಹಕ್ಕು ಬೈಯಮ್ಮ ರವರಿಗೆ ಇರಲಿಲ್ಲ ಆದಾಗಿಯು ನಾನು ದಾಖಲೆಯನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ದಾನ ಪತ್ರ ಬರೆದುಕೊಡುವ ಕಾಲಕ್ಕೆ ಬೈಯಮ್ಮ ಇವರ ಹೆಸರಿಗೆ ನಾಲ್ಕು ಮುಕ್ಕಾಲು ಗುಂಟೆ ಆಸ್ತಿ ಇತ್ತು. ನಾಲ್ಕು ಮುಕ್ಕಾಲು ಗುಂಟೆಗೆ ಅವರ ಹೆಸರಿಗೆ ಪಹಣಿ ಇತ್ತು. ಇಷ್ಟು ಮಾತ್ರ ಅವರ ಹೆಸರಿಗೆ ಇತ್ತು ಎಂದು ನನಗೆ ಗೊತ್ತಿದೆ. ಸರ್ವೆ ನಂ.೩/೨ ನೇದರ ಆಸ್ತಿಯಲ್ಲಿ ಬೈಯಮ್ಮ ಇವರು ಯಾವ ದಿಕ್ಕಿನಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಾನ ಪತ್ರ ಬರೆದುಕೊಡುವ ಕಾಲಕ್ಕೆ ಸದರಿ ಜಮೀನಿನ ಯಾವ ಭಾಗದಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ಸರಿ. ಸದರಿ ಜಮೀನ್ನನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಬೈಯಮ್ಮ ಇವರು ಸ್ವಾಧೀನದಲ್ಲಿ ಇರಲಿಲ್ಲ, ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾಖಲೆ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಬೈಯಮ್ಮ ಇವರು ಸ್ವಾಧೀನದಲ್ಲಿ ಇಲ್ಲದೆ ಇದ್ದುದ್ದರಿಂದ ದಿ: ೨೯.೦೫.೨೦೧೩ ರಂದು ದಾನ ಪತ್ರ ಬರೆದುಕೊಡುವ ಪ್ರಮಯ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಮತ್ತು ನನಗೆ ಸ್ವಾಧೀನ ಬಿಟ್ಟು ಕೊಡುವ ಪ್ರಮಯ ಇರಲಿಲ್ಲ ಎಂದರೆ ಸರಿಯಲ್ಲ.

ಪಹಣಿಯಲ್ಲಿ ವ್ಯವಸಾಯ ಮಾಡುವವ ಹೆಸರು ನಮೂದಿಸುತ್ತಾರೆ ಎಂದರೆ ಸರಿ. ಅದೇ ರೀತಿ ಉಳುಮೆ ಮಾಡುವವರ ಹೆಸರು ಬರೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಬೆಳೆ ನಮೂದು ಮಾಡುತ್ತಾರೆ ಎಂದರೆ ಸರಿ. ನಿಪಿ.೪ ರಲ್ಲಿ ಬೆಳೆ ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸುತ್ತಿರುವ ನಿಪಿ.೪ರಲ್ಲಿ ನೋ ಕ್ರಾಪ್ಸ ಎಂದು ಬರೆದಿದೆ ಎಂದರೆ ಸರಿ. ನಿಪಿ.೫ ಮತ್ತು ೬ ರಲ್ಲಿ ಬೆಳೆ ನಮೂದು ಇಲ್ಲ ಎಂದು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ

ಯಾರು ವ್ಯವಸಾಯ ಮಾಡದೇ ಇರುವುದರಿಂದ ಆ ರೀತಿ ನಮೂದಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂ.೩/೨ಬಿ೬ ನೇದರಲ್ಲಿ ಇವತ್ತಿಗೂ ನಾನು ಸ್ವಾಧೀನದಲ್ಲಿಲ್ಲ, ಆದ್ದರಿಂದ ನಮೂದಾಗಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಉಳುಮೆ ಮಾಡದೇ ಇರುವುದರಿಂದ ಅದು ಪ್ರತಿವಾದಿಗಳಿಗೆ ಸಂಬಂಧಿಸಿದ್ದಾಗಿದ್ದರಿಂದ ಆ ರೀತಿ ನಮೂದಾಗಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.೩/೨ಬಿ೬ ನೇದಕ್ಕೆ ಪಹಣಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ, ನಮ್ಮ ತಂದೆಗೆ ಗೊತ್ತು. ಆ ರೀತಿ ಪಹಣಿ ಇಲ್ಲ ಅದು ೩/೨ರಲ್ಲಿ ಒಟ್ಟುಗೂಡಿಸಲಾಗಿದೆ ಎಂದರೆ ಸರಿಯಲ್ಲ. ೩/೨ ರಲ್ಲಿ ಒಟ್ಟುಗೂಡಿಸಿರುವ ವಿಷಯ ನನಗೆ ಗೊತ್ತಿಲ್ಲ. ನಮ್ಮ ಹೆಸರಿನಲ್ಲಿ ಪಹಣಿ ಬರುತ್ತಿರುವ ಕುರಿತು ನಮ್ಮ ತಂದೆಯನ್ನು ನಾನು ಕೇಳಿ ತಿಳಿದುಕೊಂಡಿದ್ದೇನೆ. ಅಂತಹ ಪಹಣಿಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

ಈಗ ನನಗೆ ತೋರಿಸುತ್ತಿರುವ ಪಹಣಿ ಪತ್ರಿಕೆಯಲ್ಲಿ ನಾಲ್ಕು ಮುಕ್ಕಾಳು ಗುಂಟೆ ನಮೂದಿದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿ.ಡಿ.೧ ಎಂದು ಗುರುತಿಸಲಾಯಿತು. ಸರ್ವೆ ನಂ.೩/೨ಬಿ೬ ಆಸ್ತಿಯು ಸರ್ವೆ ನಂ.೩/೨ರಲ್ಲಿ ಒಟ್ಟುಗೂಡಿಸಿರುವ ವಿಷಯ ಮತ್ತು ಪಹಣಿ ಒಟ್ಟುಗೂಡಿರುವ ವಿಷಯ ನನಗೆ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕುರಿತು ನೀವು ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎನ್ನುತ್ತಾರೆ. ಬೈಯಮ್ಮ ಮುನಿಯಪ್ಪ ಮತ್ತು ನಾವು ಸದರಿ ಆಸ್ತಿಯ ಸ್ವಾಧೀನದಲ್ಲಿಲ್ಲದಿದ್ದರು, ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಕೇಸು ದಾಖಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**